ಬೈಲಹೊಂಗಲ ತಾಲ್ಲೂಕಿನ ನೇಸರಗಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವಿಜ್ಞಾನ ವಿಭಾಗವನ್ನು ಪ್ರಾರಂಭಿಸುವುದು

2198 - ಶ್ರೀ ಶಿವಾನಂದ ಕೌಜಲಗಿ (ಬೈಲಹೊಂಗಲ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ನೆಸರ್ಗಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕಲೆ ಮತ್ತು ವಾಣಿಜ್ಯ ವಿಭಾಗವನ್ನು ಸಹ ಪ್ರಾರಂಭಿಸಬೇಕೆಂದು ವಿದ್ಯಾರ್ಥಿಗಳ ಬೇಡಿಕೆ ಇದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಈ ವಿಜ್ಞಾನ ವಿಭಾಗವನ್ನು ಪ್ರಾರಂಭಿಸಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು?

ಶ್ರೀ ಎಂ. ವೀಪಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು)

ಅ) ಬಂದಿದೆ.

ಆ) ವಿಜ್ಞಾನ ವಿಭಾಗ ಪ್ರಾರಂಭಿಸಲು ಅನುಮತಿ ನೀಡಲಾಗಿದೆ.

ಖಾಸಗಿ ವಲಯದಲ್ಲಿ ವಿದ್ಯುತ್ ಉತ್ಪಾದನೆಗೆ ಅವಕಾಶ

2181 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗಿ ವಲಯದಲ್ಲಿ ವಿದ್ಯುತ್ ಉತ್ಪಾದನೆ ಮಾಡಲು ಅವಕಾಶ ಕಲ್ಪಿಸಲಾಗಿದೆಯೇ?

ಆ) ಆದರ ವಿವರಗಳನ್ನು ಒದಗಿಸುವುದು.

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಸ್ವಂತ ಬಳಕೆ ವಿದ್ಯುತ್ ಉತ್ಪಾದನೆಗೆ ಅನುಮತಿ ನೀಡಲಾಗುತ್ತಿದೆ. ಇದಲ್ಲದೆ ಕೇಂದ್ರ ಸರ್ಕಾರದ ವಾಣಿಜ್ಯೋದ್ದೇಶಗಳ ವಿದ್ಯುತ್ ಉತ್ಪಾದನೆಗೂ ಖಾಸಗಿ ವಲಯಕ್ಕೆ ಅನುಮತಿ ನೀಡುವ ನೀತಿಯನ್ನು ಅನುಮತಿಸಿರುತ್ತದೆ. ಆದರೆ ಈ ನೀತಿಯನ್ನು ಜಾರಿಗೊಳಿಸುವ ಸಲುವಾಗಿ ಕೇಂದ್ರ ಸರ್ಕಾರವು ವಿದ್ಯುತ್ ಕಾಯ್ದೆಗಳಲ್ಲಿ ಕೆಲವು ತಿದ್ದುಪಡಿಗಳನ್ನು ತರಲು ಯೋಜಿಸಿದ್ದು ಆ ತಿದ್ದುಪಡಿಗಳನ್ನು ನಿರೀಕ್ಷಿಸಲಾಗಿದೆ.

ಆ) ಉದ್ದೇಶಿಸಿರುವ ತಿದ್ದುಪಡಿಗಳ ಮುಖ್ಯಾಂಶಗಳು ಈ ಕೆಳಕಂಡಂತಿವೆ.

1) ಉತ್ಪಾದನೆ ಮಾಡುವ ಕಂಪೆನಿಯ ವ್ಯಾಖ್ಯಾನವನ್ನು ಖಾಸಗಿ ವ್ಯಕ್ತಿಗಳನ್ನೊಳಗೊಳ್ಳುವಂತೆ ತಿದ್ದುಪಡಿಸುವುದು.

2) ಪ್ರಮಾಣ ದರ, ಬಂಡವಾಳವಾಹಿ ಬಡ್ಡಿ, ಲೈಸೆನ್ಸ್ ಅವಧಿ ಮತ್ತು ಸವಕಳಿಯ ನಿಗಧಿತ ದರ ಇವುಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ನಿಯಾಮಾವಳಿಗಳನ್ನು ಖಾಸಗಿ ಲೈಸೆನ್ಸ್‌ದಾರರಿಗೆ ಸಡಿಲಗೊಳಿಸುವುದು.

3) ಉತ್ಪಾದಿತ ಕಂಪನಿಯು ಉತ್ಪಾದಿಸುವ ವಿದ್ಯುತ್ತನ್ನು ರಾಜ್ಯ ವಿದ್ಯುತ್ ಮಂಡಳಿಗೆ ಮಾರಾಟ ಮಾಡಲು ಮತ್ತು ನಿರ್ಧಿಷ್ಟ ಪ್ರಕರಣಗಳಲ್ಲಿ ಸರ್ಕಾರದ ಅನುಮತಿಯೊಂದಿಗೆ ಸಾರ್ವಜನಿಕರಿಗೆ ಮಾರಟ ಮಾಡಲು ಅವಕಾಶ ಕಲ್ಪಿಸುವುದು.

4) ಖಾಸಗಿ ವಲಯದ ಬಂಡವಾಳ ಹೂಡಿಕೆಯಿಂದ ರಾಜ್ಯದ ಸಂಪನ್ಮೂಲಗಳಲ್ಲಿ ಹೆಚ್ಚಳಗೊಳಿಸಲು ಸದರಿ ಬಂಡವಾಳ ಹೂಡಿಕೆಯು ಶೇ.60ಕ್ಕೂ ಕಡಿಮೆ ಇಲ್ಲದಂತೆ ಸಾರ್ವಜನಿಕೇತರ ಹಣಕಾಸು ಸಂಸ್ಥೆಗಳಿಂದ ಒದಗಿಸಲು ಅವಕಾಶ ಕಲ್ಪಿಸುವುದು.

5) ಖಾಸಗಿ ಲೈಸನ್ಸ್‌ದಾರರು ಮತ್ತು ಉತ್ಪಾದನಾ ಕಂಪನಿಗಳು ಗ್ರಿಡ್‌ನ ಬಳಕೆಯ ಸಮರ್ಪಕತೆಯನ್ನನುಸರಿಸಿ ವಿದ್ಯುತ್ ಉತ್ಪಾದನೆ ಮಾಡಲು ಪ್ರಾಂತೀಯ ವಿದ್ಯುತ್ ಮಂಡಳಿಯ ನಿಯಂತ್ರಣಕ್ಕೊಳಪಡಿಸಲು ಅವಕಾಶ ಮಾಡುವುದು.

ಜಿ.ಎ.ಕೆ. ರಾವ್ ವರದಿಗೆ ಕ್ರಮ

2182 - ಶ್ರೀ ವಾಟಾಳ್ ನಾಗರಾಜು (ಚಾಮರಾಜನಗರ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೃಹ ನಿರ್ಮಾಣ ಸಹಕಾರ ಸಂಘಗಳ ಅಕ್ರಮಗಳ ಬಗ್ಗೆ ನೇಮಿಸಿದ್ದ ಜಿ.ಎ.ಕೆ. ರಾವ್ ಸಮಿತಿಯ ವರದಿಯ ಬಗ್ಗೆ ಸರ್ಕಾರಕ್ಕೆ ತಲುಪಿ ಎಷ್ಟು ಸಮಯ ಆಯಿತು.?

ಆ) ಈ ವರದಿಯ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್. ಆರ್. ಮೋರೆ (ಸಹಕಾರ ರಾಜ್ಯ ಸಚಿವರು)

ಅ) ಶ್ರೀ ಜಿ.ಎ.ಕೆ. ರಾವ್‌ರವರು ಸಹಕಾರ ಸಂಘಗಳ ಕಾಯ್ದೆ ಕಲಂ 64ರಡಿಯಲ್ಲಿ ನಡೆಸಿದ್ದ ಅಂತಿಮ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ದಿನಾಂಕ 15-12-1989 ರಂದು ಸಲ್ಲಿಸಲಾಗಿದೆ.-19 ತಿಂಗಳುಗಳು.

ಆ) ಶ್ರೀ ಜಿ.ಎ.ಕೆ. ರಾವ್‌ರವರ ವಿಚಾರಣಾ ವರದಿಯ ಮೇಲೆ ಇಲಾಖೆಯ ಮಟ್ಟದಲ್ಲಿ ಈ ಕ್ರಮಗಳನ್ನು ಕೈಗೊಳ್ಳಲಾಗಿದೆ.

1) ಸದರಿ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ವಿಚಾರಣಾ ವರದಿಯ ಸಾರಾಂಶವನ್ನು ಹಾಗೂ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 68ರಡಿಯಲ್ಲಿ ನೋಟೀಸ್‌ಗಳನ್ನು ಕೊಡಲಾಗಿದೆ.

2) ಇಲಾಖಾಧಿಕಾರಿಗಳಿಂದ ಈ ಸಂಘಗಳ ಸದರಿ ನ್ಯೂನತೆಗಳ ಬಗ್ಗೆ ಪುನರ್ ಪರಿಶೀಲನೆ ನಡೆಸಲಾಗಿದೆ.

3) ಪುನರ್ ಪರಿಶೀಲನಾ ವರದಿಯಲ್ಲಿ ತಿಳಿಸಿರುವ ನ್ಯೂನತೆಗಳನ್ನು ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ. ಈ ವರದಿ ಮೇಲೆ ಸದರಿ ಸಂಘಗಳು ಭೂಸ್ವಾಧೀನ ಮಾಡಿಕೊಳ್ಳುವಲ್ಲಿ ಮಾಡಿರುವ ಅವ್ಯವಹಾರಗಳನ್ನು ಕಂದಾಯ ಮತ್ತು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ಸರ್ಕಾರದಿಂದ ತಿಳಿಸಲಾಗಿದೆ.

4) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 30 ಬಿ ಪ್ರಕಾರ ಗೃಹ ನಿರ್ಮಾಣ ಸಹಕಾರ ಸಂಘಗಳು ತನ್ನ ಸದಸ್ಯರುಗಳಿಗೆ ನಿವೇಶನಗಳನ್ನು ಹಂಚಬಾರದೆಂದು ನಿರ್ದೇಶನವನ್ನು ನೀಡಲಾಗಿದೆ.

5) ವಿಚಾರಣೆಗೆ ಸಂಬಂಧಿಸಿದಂತೆ ಸಂಘದ ಸಮಸ್ಯೆಗಳನ್ನು ಅಧ್ಯಯನ ನಡೆಸಲು ಸರ್ಕಾರವು ಈ ಬಗ್ಗೆ ಮಂತ್ರಿ ಮಂಡಲದ ಉಪ ಸಮಿತಿಯನ್ನು ರಚಿಸಿದೆ.

6) ಈ ವರದಿಯ ಆಧಾರದ ಮೇಲೆ ಎರಡು ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ವಿಶೇಷಾಧಿಕಾರಿಗಳನ್ನು ನೇಮಿಸಲಾಗಿದೆ. ಇತರೆ ವರದಿಯ ಆಧಾರದ ಮೇಲೆ 4 ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ವಿಶೇಷಾಧಿಕಾರಿಗಳನ್ನು ನೇಮಿಸಲಾಗಿದೆ.

ಪದವಿ ಪೂರ್ವ ಪರೀಕ್ಷೆಗಳಲ್ಲಿ ಭ್ರಷ್ಟಾಚಾರ

2180 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?